## ಕರ್ನಾಟಕ ಅಧಿನಿಯಮ, 1985ರ ಸಂಖ್ಯೆ: 39

(1985ರ ಅಕ್ಟೋಬರ್ 29ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಗಿದೆ.)

**ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 1985**

(1985ರ ಅಕ್ಟೋಬರ್ 18ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಪಡೆಯಲಾಗಿದೆ.)

ಬೆಂಗಳೂರು ಮಹಾನಗರ ಪ್ರದೇಶದ ಒಳಗಿರುವ ಕ್ಷೇತ್ರಗಳ ಸರಿಯಾದ ಮತ್ತು ಸುವ್ಯವಸ್ಥಿತ ಅಭಿವೃದ್ಧಿಯ ಯೋಜನೆ, ಸಮನ್ವಯ ಮತ್ತು ಮೇಲ್ವಿಚಾರಣೆಯ ಉದ್ದೇಶಕ್ಕಾಗಿ ಒಂದು ಪ್ರಾಧಿಕಾರವನ್ನು ಸ್ಥಾಪಿಸುವ ಮತ್ತು ಅದಕ್ಕೆ ಸಂಬಂಧಪಟ್ಟ ಇತರ ವಿಷಯಗಳ ಸಲುವಾಗಿ ಏರ್ಪಟ್ಟ ಒಂದು ಅಧಿನಿಯಮ

ಬೆಂಗಳೂರು ಮಹಾನಗರ ಪ್ರದೇಶದ ಒಳಗಿರುವ ಕ್ಷೇತ್ರಗಳ ಸರಿಯಾದ ಮತ್ತು ಸುವ್ಯವಸ್ಥಿತ ಅಭಿವೃದ್ಧಿಯ ಯೋಜನೆ, ಸಮನ್ವಯ ಮತ್ತು ಮೇಲ್ವಿಚಾರಣೆಯ ಉದ್ದೇಶಕ್ಕಾಗಿ ಒಂದು ಪ್ರಾಧಿಕಾರವನ್ನು ಸ್ಥಾಪಿಸುವ ಮತ್ತು ಅದಕ್ಕೆ ಸಂಬಂಧಪಟ್ಟ ಇತರ ವಿಷಯಗಳ ಸಲುವಾಗಿ ಏರ್ಪಾಟು ಮಾಡುವುದು ಯುಕ್ತವಾಗಿರುವುದರಿಂದ:

ಇದು ಭಾರತ ಗಣರಾಜ್ಯದ ಮೂವತ್ತಾರನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ:

## ಅಧ್ಯಾಯ–I

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:–**
   - ಈ ಅಧಿನಿಯಮವನ್ನು ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985 ಎಂದು ಕರೆಯತಕ್ಕದ್ದು.
   - ಇದು, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂತ ದಿನಾಂಕದಂದು ಜಾರಿಯಲ್ಲಿ ಬರತಕ್ಕದು.

2. **ಪರಿಭಾಷೆಗಳು:– ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,—**
   - "ಪ್ರಾಧಿಕಾರ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ;
   - "ಸೌಕರ್ಯಗಳು" ಎಂಬುದರಲ್ಲಿ, ರಸ್ತೆಗಳು, ಸೇತುವೆಗಳು, ಬೀದಿಗಳು, ಸಾರಿಗೆ, ವ್ಯವಸ್ಥೆ, ನೀರು ಮತ್ತು ವಿದ್ಯುತ್ ಸರಬರಾಜು, ಒಳಚರಂಡಿ ವ್ಯವಸ್ಥೆ, ಚರಂಡಿ ವ್ಯವಸ್ಥೆ, ಲೋಕೋಪಯೋಗಿ ಕಾಮಗಾರಿಗಳು, ಖಾಲಿ ಜಾಗಗಳು, ಮನರಂಜನೆ ಮೈದಾನಗಳು, ಉದ್ಯಾನಗಳು ಮತ್ತು ಇತರ ಅನುಕೂಲಗಳು, ಸೇವೆಗಳು ಮತ್ತು ಪ್ರಯೋಜನಗಳು ಸೇರುತ್ತವೆ.
   - "ಬೆಂಗಳೂರು ಮಹಾನಗರ ಪ್ರದೇಶ" ಎಂದರೆ, ಬೆಂಗಳೂರು ಜಿಲ್ಲೆ ಮತ್ತು ಕೋಲರ ಜಿಲ್ಲೆಯ ಮಾಲೂರು ತಾಲ್ಲೂಕು ಮತ್ತು ರಾಜ್ಯ ಸರ್ಕಾರವು ಆಗಿಂದಾಗ್ಗೆ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಸ್ಥಳಗಳನ್ನು ಒಳಗೊಂಡ ಪ್ರದೇಶ:
   - "ಅಧ್ಯಕ್ಷ" ಎಂದರೆ, ಪ್ರಾಧಿಕಾರದ ಅಧ್ಯಕ್ಷ;

- "ನಿಗಮ" ಎಂದರೆ, ಬೆಂಗಳೂರು ನಗರ ನಿಗಮ;
- "ಅಭಿವೃದ್ಧಿ" ಎಂಬುದು, ತನ್ನ ವ್ಯಾಕರಣ ವ್ಯತ್ಯಾಸಗಳೊಂದಿಗೆ ಕಟ್ಟಡ ನಿರ್ಮಾಣ, ಇಂಜನಿಯರಿಂಗ್ ಅಥವಾ ಯಾವುದೇ ಭೂಮಿಯಲ್ಲಿ ಅಥವಾ ಭೂಮಿಯ ಮೇಲೆ ಅಥವಾ ಭೂಮಿಯ ಕೆಳಗಿನ ಇತರ ಕಾರ್ಯಾಚರಣೆಗಳು ಅಥವಾ ಯಾವುದೇ ಕಟ್ಟಡದಲ್ಲಿ ಅಥವಾ ಭೂಮಿಯಲ್ಲಿ ಅಥವಾ ಯಾವುದೇ ಕಟ್ಟಡ ಅಥವಾ ಭೂಮಿಯ ಉಪಯೋಗದಲ್ಲಿ ಮಾಡುವ ಗಣನೀಯ ಬದಲಾವಣೆಗಳನ್ನು ಒಳಗೊಳ್ಳುತ್ತದೆ ಮತ್ತು ಇದರಲ್ಲಿ ಪುನರಭಿವೃದ್ಧಿ ಮತ್ತು ನೆಲ ವಿನ್ಯಾಸಗಳ ರೂಪಣ ಮತ್ತು ಸೌಕರ್ಯಗಳೂ ಸೇರಿದಂತೆ ಯಾವುದೇ ಭೂಮಿಯ ಉಪವಿಭಜನೆಗಳೂ ಸೇರುತ್ತವೆ;
- "ಕಾರ್ಯಕಾರಿ ಸಮಿತಿ" ಎಂದರೆ, 6ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಕಾರ್ಯಕಾರಿ ಸಮಿತಿ;
- "ನಿಧಿ" ಎಂದರೆ, ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ನಿಧಿ;
- "ಭೂಮಿ" ಎಂಬುದರಲ್ಲಿ, ಭೂಮಿಯಿಂದ ಮತ್ತು ಭೂಮಿಗೆ ಸೇರಿಕೊಂಡಿರುವ ಅಥವಾ ಭೂಮಿಗೆ ಸೇರಿಕೊಂಡಿರುವ ಯಾವುದಕ್ಕಾದರೂ ಶಾಶ್ವತವಾಗಿ ಬಂಧಿತವಾದ ವಸ್ತುಗಳಿಂದ ಉದ್ಭವಿಸುವ ಪ್ರಯೋಜನಗಳು ಸೇರುತ್ತವೆ;
- "ಸ್ಥಳೀಯ ಪ್ರಾಧಿಕಾರ" ಎಂದರೆ, ತತಾ ಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ರಚಿತವಾದ ಅಥವಾ ಮುಂದುವರೆದಿರುವ ಬೆಂಗಳೂರು ನಗರ ಪುರಸಭಾ ನಿಗಮ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ, ಕರ್ನಾಟಕ ವಿದ್ಯುತ್‌ಚ್ಛಕ್ತಿ ಮಂಡಲಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಜಿಲ್ಲಾ ಪರಿಷತ್ತು, ಪುರಸಭಾ ಪರಿಷತ್ತು, ನೈರ್ಮಲ್ಯ ಮಂಡಲಿ ಅಥವಾ ಮಂಡಲ ಪಂಚಾಯಿತಿ;
- "ಸದಸ್ಯ" ಎಂದರೆ, ಪ್ರಾಧಿಕಾರದ ಒಬ್ಬ ಸದಸ್ಯ;
- "ಮಹಾನಗರ ಆಯುಕ್ತ" ಎಂದರೆ, 8ನೇ ಪ್ರಕರಣದ ಅಡಿಯಲ್ಲಿ ನೇಮಿತನಾದ ಮಹಾನಗರ ಆಯುಕ್ತ; ಮತ್ತು
- "ವಿನಿಯಮ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ವಿನಿಯಮ.

## ಅಧ್ಯಾಯ–II
## ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ

**3. ಪ್ರಾಧಿಕಾರದ ರಚನೆ ಮತ್ತು ನಿಗಮನ.–**

- ಈ ಅಧಿನಿಯಮದ ಪ್ರಾರಂಭದ ದಿನಾಂಕದ ತರುವಾಯ, ಎಷ್ಟು ಬೇಗನೆ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಬೆಂಗಳೂರು ಮಹಾನಗರ ಪ್ರದೇಶಕ್ಕೆ, ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವೆಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ರಚಿಸತಕ್ಕದು.
- ಪ್ರಾಧಿಕಾರವು, ಚರ ಮತ್ತ ಸ್ಥಿರ ಸ್ವತ್ತುಗಳೆರಡನ್ನು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಅರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಮತ್ತು ಸದರಿ ಹೆಸರಿನಿಂದ ದಾವೆ ಹೂಡುವ ಅಥವಾ ದಾವೆಗೆ ಗುರಿಯಾಗುವ ಅಧಿಕಾರವಿರುವ ನಿರಂತರ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಒಂದು ನಿಗಮಿತ ನಿಕಾಯವಾಗಿರತಕ್ಕದು.
- ಪ್ರಾಧಿಕಾರವು ಈ ಮುಂದಿನ ಸದಸ್ಯರುಗಳನ್ನು ಹೊಂದಿರತಕ್ಕುದು, ಎಂದರೆ:–

i. ಕರ್ನಾಟಕ ಮುಖ್ಯಮಂತ್ರಿ, ಅವರು ಅಧ್ಯಕ್ಷರಾಗಿರತಕ್ಕದು;

ii. ನಗರಾಭಿವೃದ್ಧಿಯ ಪ್ರಭಾರದಲ್ಲಿರುವ ಮಂತ್ರಿ, ಅವರ ಉಪಾಧ್ಯಕ್ಷರಾಗಿರತಕ್ಕುದು;

iii. ಅಧ್ಯಕ್ಷ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ;

iv. ಮೇಯರ್, ಬೆಂಗಳೂರು ನಗರ ನಿಗಮ;

v. ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ;

vi. ಡಿವಿಷನಲ್ ಕಮೀಷನರ್, ಬೆಂಗಳೂರು ವಿಭಾಗ, ಬೆಂಗಳೂರು;

vii. ಕಾರ್ಯದರ್ಶಿ, ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರ;

viii. ಕಾರ್ಯದರ್ಶಿ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ

ix. ಕಾರ್ಯದರ್ಶಿ, ಲೋಕೋಪಯೋಗಿ, ನೀರು ಪೂರೈಕೆ ಪ್ರದೇಶಾಭಿವೃದ್ಧಿ ಮತ್ತು ವಿದ್ಯುಚ್ಛಕ್ತಿ ಇಲಾಖೆ, ಕರ್ನಾಟಕ ಸರ್ಕಾರ;

x. ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರ;

xi. ಅಧ್ಯಕ್ಷ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ;

xii. ಅಧ್ಯಕ್ಷ, ಕರ್ನಾಟಕ ಗೃಹ ನಿರ್ಮಾಣ ಮಂಡಲಿ;

xiii. ಅಧ್ಯಕ್ಷ, ಕರ್ನಾಟಕ ಕೊಳಚೆ ಪ್ರದೇಶ ನಿರ್ಮೂಲನ ಮಂಡಲಿ;

xiv. ಅಧ್ಯಕ್ಷ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ;

xv. ನಗರ ಯೋಜನಾ ನಿರ್ದೇಶಕ, ಕರ್ನಾಟಕ ಸರ್ಕಾರ;

xvi. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಾಮಾನ್ಯ), ಕರ್ನಾಟಕ ಸರ್ಕಾರ;

xvii. ಅಧ್ಯಕ್ಷ, ಬೆಂಗಳೂರು ನಗರ ಕಲಾ ಆಯೋಗ;

xviii. ಡಿವಿಷನಲ್ ರೈಲ್ವೆ ಮ್ಯಾನೇಜರ್, ದಕ್ಷಿಣ ರೈಲ್ವೆ, ಬೆಂಗಳೂರು (ಕೇಂದ್ರ ಸರ್ಕಾರದ ಸಮ್ಮತಿ ಪಡೆದು);

xix. ಜನರಲ್ ಮ್ಯಾನೇಜರ್, ಬೆಂಗಳೂರು ದೂರವಾಣಿ, ಬೆಂಗಳೂರು (ಕೇಂದ್ರ ಸರ್ಕಾರದ ಸಮ್ಮತಿ ಪಡೆದು);

xx. ಸರ್ಕಾರದಿಂದ ನೇಮಿತರಾದ, ಬೆಂಗಳೂರು ಮಹಾನಗರ ಪ್ರದೇಶವನ್ನು ಪ್ರತಿನಿಧಿಸುವ, ಕರ್ನಾಟಕ ರಾಜ್ಯ ವಿಧಾನಮಂಡಲದ ನ್ವಾಲರು ಸದಸ್ಯರು;

xxi. ಸರ್ಕಾರದಿಂದ ನೇಮಿತರಾದ, ಬೆಂಗಳೂರು ಮಹಾನಗರ ಪ್ರದೇಶದಲ್ಲಿನ ಸ್ಥಳೀಯ ಪ್ರಾಧಿಕಾರಗಳನ್ನು ಪ್ರತಿನಿಧಿಸುವ ವ್ಯಕ್ತಿಗಳ ಪೈಕಿಯಿಂದ ನಾಲ್ವರು ಸದಸ್ಯರು;

xxii. ಮಹಾನಗರ ಆಯುಕ್ತ, ಅವರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದು.

**4. ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು._**

- 3ನೇ ಪ್ರಕರಣದ (3)ನೇ ಉಪ ಪ್ರಕರಣದ(ಯು), (ವಿ) ಮತ್ತು (ಡಬ್ಲ್ಯೂ) ಬಾಬುಗಳ ಅಡಿಯಲ್ಲಿ ನೇಮಿತರಾದ ಸದಸ್ಯರು, ರಾಜ್ಯ ಸರ್ಕಾರದ ಇಚ್ಛೆಗೆ ಒಳಪಟ್ಟು, ತಾವು ಪದಧಾರಣ ಮಾಡಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಪದದಲ್ಲಿರತಕ್ಕದು ಮತ್ತು ನಿಯಮಿಸಬಹುದಾದ ಅಂಥ ಷರತ್ತುಗಳ ಅಡಿಯಲ್ಲಿ ಮರು ನೇಮಕಾತಿಗೆ ಅರ್ಹರಾಗಿರತಕ್ಕದು.
- ಪದನಿಮಿತ್ತ ಸದಸ್ಯನಲ್ಲದ ಯಾವೊಬ್ಬ ಸದಸ್ಯನು, ತನ್ನ ಹಸ್ತಾಧೀನ ಲೇಖದಲ್ಲಿ ರಾಜ್ಯ ಸರ್ಕಾರವನ್ನು ಸಂಬೋಧಿಸಿ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು.

- ಸದಸ್ಯನೊಬ್ಬನ ರಾಜೀನಾಮೆಯಿಂದ ಅಥವಾ ಅನ್ಯಥಾ ಉಂಟಾಗಿರುವ ಆಕಸ್ಮಿಕ ರಿಕ್ತತೆಯನ್ನು ರಾಜ್ಯ ಸರ್ಕಾರವು ನೇಮಕಾತಿ ಮಾಡುವ ಮೂಲಕ ಭರ್ತಿ ಮಾಡಬಹುದು ಮತ್ತು ಹಾಗೆ ನೇಮಿತರಾದ ವ್ಯಕ್ತಿಗಳು, ಯಾವ ಸದಸ್ಯನ ಸ್ಥಾನಕ್ಕೆ ಅವನು ನೇಮಿತನಾಗಿರುವನೋ ಅವನು ಅಧಿಕಾರ ಧಾರಣ ಮಾಡಿರಬಹುದಾಗಿದ್ದ ಉಳಿದ ಅವಧಿಯವರೆಗೆ ಅಧಿಕಾರ ಧಾರಣ ಮಾಡತಕ್ಕದು.
- ಪ್ರಾಧಿಕಾರದ ಅಥವಾ ಕಾರ್ಯಕಾರಿ ಸಮಿತಿಯ ಅಥವಾ ಇತರ ಯಾವುದೇ ಸಮಿತಿಯ ಯಾವುದೇ ಕೃತ್ಯವು ಅಥವಾ ವ್ಯವಹರಣೆಯು, ಸಂದರ್ಭಾನುಸಾರ, ಪ್ರಾಧಿಕಾರ, ಕಾರ್ಯಕಾರಿ ಸಮಿತಿ ಅಥವಾ ಇತರ ಯಾವುದೇ ಸಮಿತಿಯ ರಚನೆ ಅಥವಾ ಪುನರ್ರಚನೆಯಲ್ಲಿ ಯಾವುದೇ ರಿಕ್ತತೆ ಅಥವಾ ದೋಷದ ಕಾರಣ ಮಾತ್ರದಿಂದ ಅಥವಾ ಪ್ರಾಧಿಕಾರದ ರಚನೆ ಅಥವಾ ಪ್ರಕ್ರಿಯೆಯಲ್ಲಿ ಇರುವಂಥ ಪರಿಶೀಲನೆಯಲ್ಲಿರುವ ವಿಷಯದ ಗುಣಗಳಿಗೆ ಬಾಧೆಯುಂಟು ಮಾಡದ ಯಾವುದೇ ದೋಷ ಅಥವಾ ಅಕ್ರಮದ ಕಾರಣ ಮಾತ್ರದಿಂದಲೇ ಅಮಾನ್ಯವಾಗತಕ್ಕುದಲ್ಲ.
- ತಾನು ಸದಸ್ಯನಾಗಿರುವುದು ನಿಂತುಹೋಗುವ ಯಾವೊಬ್ಬ ವ್ಯಕ್ತಿಯು, ಸದಸ್ಯನಾಗಿ ಪುರ್ನನೇಮಕಾತಿಗೆ ಅರ್ಹನಾಗಿರತಕ್ಕದು.
- ಪ್ರಾಧಿಕಾರ, ಕಾರ್ಯಕಾರಿ ಸಮಿತಿ ಅಥವಾ ಇತರೆ ಯಾವುದೇ ಸಮಿತಿಯ ಸಭೆಗಳಿಗೆ ಹಾಜರಾಗುವುದಕ್ಕಾಗಿ ಪದನಿಮಿತ್ತ ಸದಸ್ಯರಲ್ಲದ ಸದಸ್ಯರಿಗೆ ಸಮದೇಯವಿರುವ ಉಪವೇಶನ ಶುಲ್ಕ ಮತ್ತು ಇತರ ಭತ್ಯಗಳು ನಿಯಮಿಸಬಹುದಾದಂತೆ ಇರತಕ್ಕುದು.

5. **ಪ್ರಾಧಿಕಾರದ ಸಭೆಗಳು:_**

- ಪ್ರಾಧಿಕಾರದ ಸಭೆಗಳನ್ನು, ಮಹಾನಗರ ಆಯುಕ್ತನು ಕರೆಯತಕ್ಕದು ಮತ್ತು ಸಾಮಾನ್ಯವಾಗಿ, ಕನಿಷ್ಠ ಪಕ್ಷ ಮೂರು ತಿಂಗಳಿಗೊಂದು ಬಾರಿ ಅಧ್ಯಕ್ಷನು ನಿರ್ಧರಿಸಬಹುದಾದ ಪ್ರಾಧಿಕಾರದ ಅಧಿಕಾರ ವ್ಯಾಪಿಯೊಳಗಿರುವಂಥ ಸ್ಥಳದಲ್ಲಿ ಮತ್ತು ಅಂಥ ಸಮಯದಲ್ಲಿ ಅದು ಸಭೆ ಸೇರತಕ್ಕುದು.
- ಪ್ರಾಧಿಕಾರವು ತನ್ನ ಸಭೆಗಳ ಕಾರ್ಯಕಲಾಪಗಳಿಗೆ ಸಂಬಂಧಪಟ್ಟಂತೆ (ಸಭೆಗಳಲ್ಲಿಯ ಗಣಪೂರ್ತಿಯೂ ಸೇರಿದಂತೆ), ವಿನಿಯಮಗಳಿಂದ ನಿಯಮಿಸಬಹುದಾದಂಥ ಪ್ರಕ್ರಿಯೆ ನಿಯಮಗಳನ್ನು ಪಾಲಿಸತಕ್ಕದು.
- ಅಧ್ಯಕ್ಷ, ಅಥವಾ ಯಾವುದೇ ಕಾರಣದಿಂದ ಸಭೆಗೆ ಹಾಜರಾಗಲು ಅವನಿಗೆ ಅಸಾಧ್ಯವಾದರೆ, ಉಪಾಧ್ಯಕ್ಷ ಅಥವಾ ಯಾವುದೇ ಕಾರಣದಿಂದ ಸಭೆಗೆ ಹಾಜರಾಗಲು ಅವನಿಗೂ ಅಸಾಧ್ಯವಾದರೆ, ಸಭೆಯಲ್ಲಿ ಹಾಜರಿರುವ ಸದಸ್ಯರಿಂದ ಆಯ್ಕೆಗೊಂಡ ಇತರ ಯಾವೊಬ್ಬ ಸದಸ್ಯನು ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸತಕ್ಕದು.
- ಪ್ರಾಧಿಕಾರದ ಸಭೆಯ ಮುಂದೆ ಬರುವ ಎಲ್ಲ ಪ್ರಶ್ನೆಗಳನ್ನು ಹಾಜರಿರುವ ಮತ್ತು ಮತ ನೀಡುವ ಸದಸ್ಯರ ಬಹುಮತದಿಂದ ನಿರ್ಧರಿಸತಕ್ಕದು ಮತ್ತು ಮತಗಳು ಸಮಾನವಾಗಿದ್ದ ಸನ್ನಿವೇಶದಲ್ಲಿ, ಅಧ್ಯಕ್ಷ ಅಥವಾ ಅವನ ಗೈರುಹಾಜರಿಯಲ್ಲಿ, ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯು, ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದು ಮತ್ತು ಚಲಾಯಿಸತಕ್ಕುದು.
- ಸದಸ್ಯನು, ಪ್ರಾಧಿಕಾರದ ಅಥವಾ ಅದರ ಸಮಿತಿಯ ಯಾವುದೇ ಸಭೆಯಲ್ಲಿ ಅವನು ತಾನೇ ಸ್ವತಃ ಅಥವಾ ಪಾಲುದಾರನ ಮೂಲಕ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಷೇರು ಅಥವಾ ಹಿತಾಸಕ್ತಿ ಹೊಂದಿರುವ ಯಾವುದೇ ವಿಷಯದ ಚರ್ಚೆಯಲ್ಲಿ ಭಾಗವಹಿಸತಕ್ಕುದಲ್ಲ.

6. **ಕಾರ್ಯಕಾರಿ ಸಮಿತಿ: _**

i. ಪ್ರಾಧಿಕಾರದ (ಕೆಳಕಂಡವರನ್ನು ಹೊಂದಿರುವ) ಒಂದು ಕಾರ್ಯಕಾರಿ ಸಮಿತಿಯಿರತಕ್ಕುದು. —

- ನಗರಾಭಿವೃದ್ಧಿಯ ಪ್ರಭಾರದಲ್ಲಿರುವ ಮಂತ್ರಿ, ಅವರು ಅಧ್ಯಕ್ಷರಾಗಿರತಕ್ಕದು;
- ಮಹಾನಗರ ಆಯುಕ್ತರು, ಅವರು ಉಪಾಧ್ಯಕ್ಷರಾಗಿರತಕ್ಕದು;
- ಅಧ್ಯಕ್ಷ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ;
- ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ;
- ಮೇಯರ್, ಬೆಂಗಳೂರು ನಗರ ನಿಗಮ;
- ಆಯುಕ್ತರು, ಬೆಂಗಳೂರು ನಗರ ನಿಗಮ;
- ಕಾರ್ಯದರ್ಶಿ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ
- ಕಾರ್ಯದರ್ಶಿ, ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರ;
- ಕಾರ್ಯದರ್ಶಿ, ಲೋಕೋಪಯೋಗಿ, ನೀರು ಪೂರೈಕೆ ಪ್ರದೇಶಾಭಿವೃದ್ಧಿ ಮತ್ತು ವಿದ್ಯುಚ್ಛಕ್ತಿ ಇಲಾಖೆ;
- ಅಧ್ಯಕ್ಷ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ;
- ಪಟ್ಟಣ ಯೋಜನೆಯ ನಿರ್ದೇಶಕ, ಕರ್ನಾಟಕ ಸರ್ಕಾರ;
- ಡಿವಿಷನಲ್ ಕಮಿಷನರ್, ಬೆಂಗಳೂರು ವಿಭಾಗ, ಬೆಂಗಳೂರು.

ii. ಪ್ರಾಧಿಕಾರದ ಸಾಮಾನ್ಯ ಅಧಿಕೃತ ಅಧೀಕ್ಷಣೆ ಮತ್ತು ನಿಯಂತ್ರಣಕ್ಕೊಳಪಟ್ಟು, ಪ್ರಾಧಿಕಾರದ ವ್ಯವಹಾರಗಳ ಆಡಳಿತವು ಕಾರ್ಯಕಾರಿ ಸಮಿತಿಯಲ್ಲಿ ನಿಹಿತವಾಗಿರತಕ್ಕದು.

iii. ನಿಯಮಗಳಿಗೆ ಮತ್ತು ಪ್ರಾಧಿಕಾರದ ನಿರ್ದೇಶನಗಳಿಗೆ ಒಳಪಟ್ಟು, ಕಾರ್ಯಕಾರಿ ಸಮಿತಿಯು, ಪ್ರಾಧಿಕಾರವು ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು ಚಲಾಯಿಸಬಹುದು ಮತ್ತು ಪ್ರಾಧಿಕಾರದ ಮೂಲಕ ನಿರ್ವಹಿಸಬಹುದಾದ ಅಥವಾ ಮಾಡಬಹುದಾದ ಯಾವುದೇ ಕೃತ್ಯವನ್ನು ಅಥವಾ ಯಾವುದೇ ಕೆಲಸವನ್ನು ಕೈಗೊಳ್ಳಬಹುದು.

iv. ಕಾರ್ಯಕಾರಿ ಸಮಿತಿಯು ಅನುಸರಿಬೇಕಾದ ಪ್ರಕ್ರಿಯೆ ಮತ್ತು ಕಾರ್ಯಕಾರಿ ಸಮಿತಿಗೆ ಸಂಬಂಧಪಟ್ಟ ಇತರ ಎಲ್ಲ ವಿಷಯಗಳು, ವಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕುದು.

**7. ಇತರ ಸಮಿತಿಗಳ ನೇಮಕಾತಿ:_**

- ಪ್ರಾಧಿಕಾರವು ಆಗಿಂದಾಗ್ಗೆ, ತಾನು ಸೂಕ್ತವೆಂದು ಪರಿಗಣಿಸಬಹುದಾದಂಥ ಸದಸ್ಯರನ್ನೊಳಗೊಂಡಿರುವ ಸಮಿತಿಗಳನ್ನು ನೇಮಿಸಬಹುದು ಮತ್ತು ಸರ್ಕಾರದ ಅನುಮತಿಯೊಂದಿಗೆ, ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಅವಧಿಗೆ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ಸಹವರ್ತಿಯಾಗಿ ಮಾಡಬಹುದು ಮತ್ತು ತನಿಖೆ ನಡೆಸಿ ವರದಿ ನೀಡಲು ಈ ಅಧಿನಿಯಮದ ಉದ್ದೇಶಗಳಿಗೆ ಸಂಬಂಧಪಟ್ಟ ಯಾವುದೇ ವಿಷಯವನ್ನು ಅಂಥ ಸಮಿತಿಗಳಿಗೆ ಕಳುಹಿಸಿಕೊಡಬಹುದು.
- (1)ನೇ ಉಪ ಪ್ರಕರಣದ ಅಡಿಯಲ್ಲಿ ನೇಮಿತವಾದ ಪ್ರತಿಯೊಂದು ಸಮಿತಿಯು ಪ್ರಾಧಿಕಾರವು ಆಗಿಂದಾಗ್ಗೆ ನೀಡಬಹುದಾದ ಯಾವುದೇ ಆದೇಶಗಳಿಗನುಗುಣವಾಗಿ ವರ್ತಿಸತಕ್ಕದು ಮತ್ತು ಪ್ರಾಧಿಕಾರವು, ಹಾಗೆ ನೇಮಿತವಾದ ಸಮಿತಿಯ ರಚನೆಯನ್ನು ಯಾವುದೇ ಸಮಯದಲ್ಲಿ ಬದಲಾಯಿಸಬಹುದು ಅಥವಾ ಯಾವುದೇ ಅಂಥ ನೇಮಕಾತಿಯನ್ನು ರದ್ದುಪಡಿಸಬಹುದು.

ಪ್ರಾಧಿಕಾರವು ಅಂಥ ಪ್ರತಿಯೊಂದು ಸಮಿತಿಯ ಅಧ್ಯಕ್ಷನೆಂದು ಸದಸ್ಯರಲ್ಲಿ ಒಬ್ಬನನ್ನು ನಾಮನಿರ್ದೇಶನ ಮಾಡತಕ್ಕದು.

- ಸಮಿತಿಗಳು ಅನುಸರಿಸಬೇಕಾದ ಪ್ರಕ್ರಿಯೆ ಮತ್ತು ಸಮಿತಿಗಳಿಗೆ ಸಂಬಂಧಪಟ್ಟ ಇತರ ಎಲ್ಲ ವಿಷಯಗಳು ವಿನಿಯಮಗಳಿಂದ ನಿಯಮಿಸಬಹುದಾದಂತೆ ಇರತಕ್ಕುದು.

**8. ಅಧಿಕಾರಿಗಳು ಮತ್ತು ನೌಕರರು:_**

- ಮಹಾನಗರ ಆಯುಕ್ತನನ್ನು ರಾಜ್ಯ ಸರ್ಕಾರವು ನೇಮಿಸತಕ್ಕುದು, ಅವನು ಪ್ರಾಧಿಕಾರದ ಪ್ರಧಾನ ಆಡಳಿತಗಾರ ಮತ್ತು ಕಾರ್ಯ ನಿರ್ವಹಣಾಧಿಕರಿಯಾಗಿರತಕ್ಕದು; ರಾಜ್ಯ ಸರ್ಕಾರವು, ಆದೇಶದ ಮೂಲಕ, ಆಗಿಂದಾಗ್ಗೆ, ಮಹಾನಗರ ಆಯುಕ್ತನ ವೇತನ ಮತ್ತು ಸೇವೆಯ ಇತರ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಹಾಗೂ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ಧರಿಸತಕ್ಕುದು. ಅವನು ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂತ ಮೂರು ವರ್ಷಗಳಿಗೆ ಮೀರದಂತ ಅವಧಿಗೆ ನೇಮಿತನಾಗತಕ್ಕದು ಮತ್ತು ನೇಮಕಾತಿಯನ್ನು ಒಂದು ಬಾರಿಗೆ ಮೂರು ವರ್ಷಗಳಿಗೆ ಮೀರದಂತ ಅವಧಿಗೆ ಆಗಿಂದಾಗೆ ವಿಸ್ತರಿಸಬಹುದು.
- ರಾಜ್ಯ ಸರ್ಕಾರವು, ಒಬ್ಬ ಅಥವಾ ಹೆಚ್ಚು ಉಪ ಅಥವಾ ಸಹಾಯಕ ಮಹಾನಗರ ಆಯುಕ್ತರನ್ನು, ಒಬ್ಬ ಪಟ್ಟಣ ಯೋಜಕನನ್ನು, ಒಬ್ಬ ಕಾನೂನು ಅಧಿಕಾರಿಯನ್ನು ಮತ್ತು ಒಬ್ಬ ಲೆಕ್ಕ ತಂತ್ರಾಧಿಕಾರಿಯನ್ನು ನೇಮಿಸಬಹುದು. ರಾಜ್ಯ ಸರ್ಕಾರವು, ಆದೇಶದ ಮೂಲಕ ಮಹಾನಗರ ಉಪಾಯುಕ್ತ, ಮಹಾನಗರ ಸಹಾಯಕ ಆಯುಕ್ತ, ಪಟ್ಟಣ ಯೋಜಕ, ಕಾನೂನು ಅಧಿಕಾರಿ ಮತ್ತು ಲೆಕ್ಕಪತ್ರಾಧಿಕಾರಿಯ ವೇತನ ಮತ್ತು ಸೇವೆಯ ಇತರ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಆಗಿಂದಾಗ್ಗೆ ನಿರ್ಧರಿಸತಕ್ಕುದು.
- ಪ್ರಾಧಿಕಾರವು ಆಗಿಂದಾಗ್ಗೆ, ಪ್ರಾಧಿಕಾರದ ಪ್ರಕಾರ್ಯಗಳನ್ನು ದಕ್ಷತೆಯಿಂದ ನೆರವೇರಿಸಲು ಅಗತ್ಯವಿರಬಹುದಾದಂಥ ಅಧಿಕಾರಿಗಳ ಮತ್ತು ನೌಕರರ ಹುದ್ದೆಗಳ ಸೃಜನೆಗೆ ಮಂಜೂರಾತಿ ನೀಡಬಹುದು, ಅಂಥ ಅಧಿಕಾರಿಗಳ ಮತ್ತು ನೌಕರರ ಸೇವಾಭರ್ತಿಯ, ನೇಮಕಾತಿಯ ಮತ್ತು ಸೇವೆಯ ಷರತ್ತುಗಳು ಮತ್ತು ಅಧಿಕಾರಿಗಳು ಮತ್ತು ಕರ್ತವ್ಯಗಳು ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂತೆ ಇರತಕ್ಕುದು.

ಪರಂತು, ಒಂದು ಸಾವಿರದ ಐನೂರು ರೂಪಾಯಿ ಮತ್ತು ಅದಕ್ಕಿಂತ ಮೇಲ್ಪಟ್ಟ ಕನಿಷ್ಠ ವೇತನದ ಹುದ್ದೆಯನ್ನು ಸರ್ಕಾರದ ಅನುಮೋದನೆಯಿಲ್ಲದೆ ಸೃಜಿಸತಕ್ಕುದಲ್ಲ.

## ಅಧ್ಯಾಯ–III
## ಪ್ರಾಧಿಕಾರದ ಅಧಿಕಾರಗಳು ಮತ್ತು ಪ್ರಕಾರ್ಯಗಳು

**9. ಪ್ರಾಧಿಕಾರದ ಅಧಿಕಾರಗಳು ಮತ್ತು ಪ್ರಕಾರ್ಯಗಳು:_**

- ಈ ಅಧಿನಿಯಮದ ಉಪ ಬಂಧಗಳು ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳಿಗೊಳಪಟ್ಟು ಪ್ರಾಧಿಕಾರದ ಪ್ರಕಾರ್ಯಗಳು ಈ ಮುಂದಿನಂತಿರತಕ್ಕುದು,_

  i. ಬೆಂಗಳೂರು ಮಹಾನಗರ ಪ್ರದೇಶದ ಸಮೀಕ್ಷೆ ನಡೆಸುವುದು ಮತ್ತು ಹಾಗೆ ನಡೆಸಲಾದ ಸಮೀಕ್ಷೆಗಳ ಬಗ್ಗೆ ವರದಿಗಳನ್ನು ಸಿದ್ಧಪಡಿಸುವುದು;

  ii. ಬೆಂಗಳೂರು ಮಹಾನಗರ ಪ್ರದೇಶದ ಅಭಿವೃದ್ಧಿಗಾಗಿ ಒಂದು ರಚನಾ ವಿನ್ಯಾಸ ಯೋಜನೆಯನ್ನು ಸಿದ್ಧಪಡಿಸುವುದು;

iii. ರಚನಾ ವಿನ್ಯಾಸ ಯೋಜನೆಯಲ್ಲಿ ಆಲೋಚಿಸಲಾಗಿರುವಂಥ ಕಾಮಗಾರಿಗಳು ಕಾರ್ಯಗತವಾಗುವಂತೆ ಮಾಡುವುದು.

iv. ಬೆಂಗಳೂರು ಮಹಾನಗರ ಪ್ರದೇಶದ ರಚನಾ ವಿನ್ಯಾಸ ಯೋಜನೆಯನ್ನು ಕಾರ್ಯಗತಗೊಳಿಸಲು ಅಗತ್ಯವಿರುವಷ್ಟು ಸ್ಕೀಮ್‌ಗಳನ್ನು ರೂಪಿಸುವುದು.

v. ಸದರಿ ಸ್ಕೀಮ್‌ಗಳಿಗನುಸಾರವಾಗಿ ಪಟ್ಟಣ ಯೋಜನಾ ಸ್ಕೀಮ್‌ಗಳ ಮತ್ತು ಬೆಂಗಳೂರು ಮಹಾನಗರ ಪ್ರದೇಶದ ಅಭಿವೃದ್ಧಿ ಕಾಮಗಾರಿಗಳ ಕಾರ್ಯನಿರ್ವಹಣೆಯನ್ನು ಸುನಿಶ್ಚಿತಗೊಳಿಸುವುದು ಮತ್ತು ಸಮನ್ವಯಗೊಳಿಸುವುದು.

vi. ಬೆಂಗಳೂರು ಮಹಾನಗರ ಪ್ರದೇಶದ ಅಭಿವೃದ್ಧಿಯ ಸಲುವಾಗಿ ಯಾವುದೇ ಯೋಜನೆ ಅಥವಾ ಸ್ಕೀಮಿಗಾಗಿ ಹಣಕಾಸು ಸಂಗ್ರಹಿಸುವುದು ಮತ್ತು ಅಂಥ ಯೋಜನೆ ಅಥವಾ ಸ್ಕೀಮನ್ನು ಕಾರ್ಯಗತಗೊಳಿಸಲು ಪ್ರದೇಶದಲ್ಲಿರುವ ಸ್ಥಳೀಯ ಪ್ರಾಧಿಕಾರಗಳಿಗೆ ಸಹಾಯ ನೀಡುವುದು.

vii. ಯಾವ ಉದ್ದೇಶಗಳಿಗಾಗಿ ಪ್ರಾಧಿಕಾರವನ್ನು ರಚಿಸಲಾಗಿದೆಯೋ ಆ ಉದ್ದೇಶಗಳ ಮುಂದುವರಿಕೆಗಾಗಿ, ಸರ್ಕಾರದಿಂದ ವಹಿಸಿಕೊಡಬಹುದಾದ ಅಥವಾ ಅದಕ್ಕೆ ಅವಶ್ಯವಿರುವ ಯಾವುದೇ ವಿಷಯಗಳಿಗೆ ಅಗತ್ಯವಿರಬಹುದಾದ ಅಥವಾ ಅದಕ್ಕೆ ಅನುಷಂಗಿಕವಾದ ಅಥವಾ ಸಹಾಯಕವಾದ ಇತರೆ ಅಂಥ ಕೃತ್ಯಗಳನ್ನು ಮತ್ತು ಕೆಲಸಗಳನ್ನು ಮಾಡುವುದು.

viii. ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಯಾವುದೇ ಅಭಿವೃದ್ಧಿ ಯೋಜನೆ ಅಥವಾ ನಗರ ಯೋಜನೆ ಸ್ಕೀಮ್‌ಗಳ ಕಾರ್ಯನಿರ್ವಹಣೆಯ ಕೆಲಸವನ್ನು ವಹಿಸಿಕೊಡುವುದು,

ix. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಲಿ, ಬೆಂಗಳೂರು ನಗರ ನಿಗಮ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ, ಕರ್ನಾಟಕ ಕೊಳಚೆ ಪ್ರದೇಶ ನಿರ್ಮೂಲನ ಮಂಡಲಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮತ್ತು ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಅಂಥ ಇತರ ನಿಕಾಯಗಳ ಚಟುವಟಿಕೆಗಳನ್ನು ಸಮನ್ವಯಗೊಳಿಸುವುದು.

**10. ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅನುಮತಿಯಿಲ್ಲದೆ ಇತರೆ ಪ್ರಾಧಿಕಾರ ಅಥವಾ ವ್ಯಕ್ತಿಗಳು ಕೆಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳತಕ್ಕುದಲ್ಲ.–**

- ತತ್ಕಾಲದಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಪೂರ್ವಾನುಮತಿಯಿದ್ದ ಹೊರತು ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ ಮೂಲಕ ಆಗಿಂದಾಗ್ಗೆ ನಿರ್ದಿಷ್ಟ ಪಡಿಸಬಹುದಾದ ರೀತಿಯ ಯಾವುದೇ ಅಭಿವೃದ್ಧಿ ಕಾರ್ಯವನ್ನು ಯಾವುದೇ ಪ್ರಾಧಿಕಾರವು ಅಥವಾ ಯಾವೊಬ್ಬ ವ್ಯಕ್ತಿಯು ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಕೈಗೊಳ್ಳತಕ್ಕುದಲ್ಲ.

- ಬೆಂಗಳೂರು ಮಹಾನಗರ ಪ್ರದೇಶದಲ್ಲಿ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿತವಾದ ಯಾವುದೇ ಅಭಿವೃದ್ಧಿ ಕಾರ್ಯದ ಸಲುವಾಗಿ ಅಂಥ ಅಭಿವೃದ್ಧಿಗಾಗಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವು ಅನುಮತಿ ನೀಡಿದ ಹೊರತು ಸ್ಥಳೀಯ ಪ್ರಾಧಿಕಾರವು ಅನುಮತಿ ನೀಡತಕ್ಕುದಲ್ಲ.
- (1)ನೇ ಉಪಪ್ರಕರಣದಲ್ಲಿ ಉಲ್ಲೇಖಿತವಾದ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲು ಯಾವುದೇ ಪ್ರಾಧಿಕಾರ ಅಥವಾ ವ್ಯಕ್ತಿಯು ಅಂಥ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲು ಅನುಮತಿಗಾಗಿ, ಬೆಂಗಳೂರು ನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ಲಿಖಿತದಲ್ಲಿ ಅರ್ಜಿ ಸಲ್ಲಿಸತಕ್ಕುದು.
- ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು, ತಾನು ಅವಶ್ಯಕವೆಂದು ಭಾವಿಸುವ ಅಂಥ ವಿಚಾರಣೆಯನ್ನು ಮಾಡಿದ ತರುವಾಯ, ವಿಧಿಸಲು ಯೋಗ್ಯವೆಂದು ತಾನು ಭಾವಿಸಬಹುದಂಥ ಷರತ್ತುಗಳಿಲ್ಲದ ಅಥವಾ ಅಂಥ ಷರತ್ತುಗಳೊಂದಿಗೆ ಅಂಥ ಅನುಮತಿಯನ್ನು ನೀಡಬಹುದು ಅಥವಾ ಅನುಮತಿಯನ್ನು ನಿರಾಕರಿಸಬಹುದು.
- (4)ನೇ ಉಪಪ್ರಕರಣದ ಅಡಿಯಲ್ಲಿನ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ತೀರ್ಮಾನದಿಂದ ಬಾಧಿತವಾದ ಯಾವುದೇ ಪ್ರಾಧಿಕಾರ ಅಥವಾ ವ್ಯಕ್ತಿ, ತೀರ್ಮಾನದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅಂಥ ತೀರ್ಮಾನದ ವಿರುದ್ಧ ರಾಜ್ಯ ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು ಮತ್ತು ಅದರ ಮೇಲು ಅದರ ತೀರ್ಮಾನವು ಅಂತಿಮವಾಗಿತಕ್ಕುದು;

  ಪರಂತು, ಅಂಥ ಅಪೀಲನ್ನು ಸಲ್ಲಿಸುವ, ಬಾಧಿತ ಪ್ರಾಧಿಕಾರವು ಕೇಂದ್ರ ಸರ್ಕಾರದ ಆಡಳಿತ ನಿಯಂತ್ರಣಕ್ಕೊಳಪಟ್ಟಿರುವಲ್ಲಿ, ಕೇಂದ್ರ ಸರ್ಕಾರದೊಂದಿಗೆ ಸಮಾಲೋಚನೆ ನಡೆಸಿದ ತರುವಾಯ ರಾಜ್ಯ ಸರ್ಕಾರವು ಅಪೀಲನ್ನು ತೀರ್ಮಾನಿಸತಕ್ಕುದು,
- (4)ನೇ ಉಪಪ್ರಕರಣದ ಅಡಿಯಲ್ಲಿ ನೀಡಲಾಗಿರುವ (5)ನೇ ಪ್ರಕರಣದ ಅಡಿಯಲ್ಲಿ ಮಾರ್ಪಾಟುಗೊಂಡ ತೀರ್ಮಾನಕ್ಕೆ ವಿರುದ್ಧವಾಗಿ ಯಾವುದೇ ವ್ಯಕ್ತಿಯು ಅಥವಾ ಪ್ರಾಧಿಕಾರವು ಯಾವುದೇ ಕೃತ್ಯವನ್ನು ಮಾಡಿದ ಸಂದರ್ಭದಲ್ಲಿ, ಅಂಥ ತೀರ್ಮಾನಕ್ಕೆ ವಿರುದ್ಧವಾಗಿ ಕೈಗೊಂಡ ಸುಧಾರಣೆ ಕಾರ್ಯವನ್ನು ಕೆಡಹುವ, ನಾಶಪಡಿಸುವ ಅಥವಾ ತೆಗೆದುಹಾಕಲು ತಗುಲಿದ ವೆಚ್ಚವನ್ನು ಸಂಬಂಧಪಟ್ಟ ವ್ಯಕ್ತಿಯಿಂದ ಅಥವಾ ಪ್ರಾಧಿಕಾರದಿಂದ ವಸೂಲು ಮಾಡುವ ಅಧಿಕಾರವನ್ನು ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು ಹೊಂದಿರತಕ್ಕುದು.

## ಅಧ್ಯಾಯ–IV
## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**11. ಪ್ರಾಧಿಕಾರದ ನಿಧಿಗಳು:_**

- ಪ್ರಾಧಿಕಾರವು, ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ಹೊಂದಿರತಕ್ಕುದು ಮತ್ತು ಪ್ರಾಧಿಕಾರದಿಂದ ಪ್ರಾಧಿಕೃತಗೊಳಿಸಬಹುದಾದಂಥ ಅಧಿಕಾರಿಗಳು ಅದನ್ನು ನಿರ್ವಹಿಸತಕ್ಕುದು.
- ಈ ಅಧಿನಿಯಮದ ಎಲ್ಲ ಅಥವಾ ಯಾವುದೇ ಉದ್ದೇಶಗಳಿಗಾಗಿ ಪ್ರಾಧಿಕಾರವು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಒಂದು ಸ್ಥಳೀಯ ಪ್ರಾಧಿಕಾರ ಅಥವಾ ಯಾವೊಬ್ಬ ವ್ಯಕ್ತಿ ಅಥವಾ

ನಿಗಮಿತವಾದ ಅಥವಾ ನಿಗಮಿತವಾಗಿಲ್ಲದ ನಿಕಾಯದಿಂದ ಅನುದಾನ, ಅರ್ಥಿಕ ಸಹಾಯ ಕೊಡುಗೆ, ದಾನ ಮತ್ತು ಕಾಣಿಕೆಗಳನ್ನು ಸ್ವೀಕರಿಸಬಹುದು.

- ಪ್ರಾಧಿಕಾರವು ತನ್ನ ಆಡಳಿತಾತ್ಮಕ ವೆಚ್ಚಗಳನ್ನು ತನ್ನದೇ ಆದ ಸಂಪನ್ಮೂಲಗಳಿಂದ ಪೂರೈಸಲು ಸಮರ್ಥವಾಗುವವರೆಗೆ, ರಾಜ್ಯ ಸರ್ಕಾರವು, ಪ್ರತಿ ವರ್ಷವು, ಪ್ರಾಧಿಕಾರದ ಆಡಳಿತಾತ್ಮಕ ವೆಚ್ಚಗಳಿಗೆ ಸಮವಾದ ಹಣದ ಅನುದಾನವನ್ನು ಪ್ರಾಧಿಕಾರಕ್ಕೆ ನೀಡತಕ್ಕದು.
- ಈ ಅಧಿನಿಯಮದ ನಿಮಿತ್ತ ಪ್ರಾಧಿಕಾರದಿಂದ ಅಥವಾ ಪ್ರಾಧಿಕಾರದ ಪರವಾಗಿ ಸ್ವೀಕೃತವಾದ ಎಲ್ಲ ಹಣಗಳು ಮತ್ತು ಪ್ರಾಧಿಕಾರಕ್ಕೆ ಒದಗಿ ಬರುವ ಅಥವಾ ಅದು ಸಾಲ ಪಡೆದ ಎಲ್ಲ ಬಡ್ಡಿಗಳು, ಲಾಭಗಳು ಮತ್ತು ಇತರ ಹಣಗಳು ನಿಧಿಗೆ ಜಮೆಯಾಗತಕ್ಕದು.
- ರಾಜ್ಯ ಸರ್ಕಾರವು ಅಥವಾ ಅನ್ಯಥಾ ನಿರ್ದೇಶಿಸಿದ ಹೊರತು ಮೇಲಿನ ಉಪಬಂಧಗಳಲ್ಲಿ ನಿರ್ದಿಷ್ಟ ಪಡಿಸಿದ ಮತ್ತು ನಿಧಿಯ ಭಾಗವಾಗುವ ಎಲ್ಲ ಹಣಗಳು ಮತ್ತು ಜಮೆಗಳನ್ನು ಭಾರತ ರಿಜರ್ವ್ ಬ್ಯಾಂಕ್ ಅಧಿನಿಯಮ, 1934 ರಲ್ಲಿ ಪರಿಭಾಷಿಸಲಾಗಿರುವ ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ಠೇವಣಿ ಇಡತಕ್ಕದು ಅಥವಾ ರಾಜ್ಯ ಸರ್ಕಾರದಿಂದ ಅನುಮೋದಿತವಾದಂಥ ಭದ್ರತೆಗಳಲ್ಲಿ ತೊಡಗಿಸತಕ್ಕದು.
- ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಮತ್ತು ಅದರ ಉದ್ದೇಶಗಳಿಗಾಗಿ ನಿಧಿಯನ್ನು ಮತ್ತು ಪ್ರಾಧಿಕಾರದಲ್ಲಿ ನಿಹಿತವಾಗಿರುವ ಇತರ ಎಲ್ಲ ಆಸ್ತಿಗಳನ್ನು ಅದು ಹೊಂದಿರತಕ್ಕದು ಮತ್ತು ವಿನಿಯೋಗಿಸತಕ್ಕದು.

12. **ಆಯವ್ಯಯ.**_ ಪ್ರಾಧಿಕಾರವು, ಪ್ರತಿವರ್ಷವು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ ಮುಂದಿನ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ, ಪ್ರಾಧಿಕಾರದ ಅಂದಾಜು ಜಮೆಗಳು ಮತ್ತು ಬಟವಾಡೆಗಳನ್ನು ತೋರಿಸುವ ವಾರ್ಷಿಕ ಆಯವ್ಯಯ ಅಂದಾಜೊಂದನ್ನು ತಯಾರಿಸತಕ್ಕದು ಮತ್ತು ಅದರ ಒಂದು ಪ್ರತಿಯನ್ನು ರಾಜ್ಯಸರ್ಕಾರಕ್ಕೆ ಸಲ್ಲಿಸತಕ್ಕದು.

13. **ವಾರ್ಷಿಕ ವರದಿ.**_ ಪ್ರಾಧಿಕಾರವು ಪ್ರತಿವರ್ಷದ ಮುಕ್ತಾಯದ ತರುವಾಯ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ದಿನಾಂಕಕ್ಕೆ ಮುಂಚೆ ಅಂಥ ವರ್ಷದಲ್ಲಿಯ ತನ್ನ ಚಟುವಟಿಕೆಗಳ ವರದಿಯನ್ನು ತಯಾರಿಸತಕ್ಕದು ಮತ್ತು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದು ಮತ್ತು ರಾಜ್ಯ ಸರ್ಕಾರವು ಅಂಥ ವರದಿಯ ಒಂದು ಪ್ರತಿಯನ್ನು ರಾಜ್ಯ ವಿಧಾನ ಮಂಡಲದ ಎರಡೂ ಸದನಗಳ ಮುಂದೆ ಮಂಡಿಸುವಂತೆ ಮಾಡತಕ್ಕದು.

**14. ಪ್ರಾಧಿಕಾರಕ್ಕೆ ಅರ್ಥಿಕ ಸಹಾಯ ಮತ್ತು ಸಾಲಗಳು.**_

- ರಾಜ್ಯ ಸರ್ಕಾರವು ಆಗಿಂದಾಗ್ಗೆ ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಪ್ರಾಧಿಕಾರಕ್ಕೆ ಆರ್ಥಿಕ ಸಹಾಯವನ್ನು ನೀಡಬಹುದು.

- ರಾಜ್ಯ ಸರ್ಕಾರವು ಈ ಅಧಿನಿಯನದ ಉಪಬಂಧಗಳಿಗೆ ಅಸಂಗತವಾಗಿಲ್ಲದಂಥ ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಪ್ರಾಧಿಕಾರಕ್ಕೆ ಸಾಲಗಳನ್ನು ಆಗಿಂದಾಗ್ಗೆ ನೀಡಬಹುದು.

15. **ಸಾಲ ಪಡೆಯುವುದಕ್ಕೆ ಪ್ರಾಧಿಕಾರದ ಅಧಿಕಾರ._** ಪ್ರಾಧಿಕಾರವು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಈ ಸಂಬಂಧದಲ್ಲಿ ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ಈ ಅಧಿನಿಯಮದ ಉದ್ದೇಶಗಳಿಗಾಗಿ ಅಗತ್ಯವಿರುವ ಯಾವುದೇ ಹಣವನ್ನು ಆಗಿಂದಾಗ್ಗೆ ಸಾಲ ಪಡೆಯಬಹುದು.

**16. ಲೆಕ್ಕ ಮತ್ತು ಲೆಕ್ಕ ಪರಿಶೋಧನೆ._**

- ಪ್ರಾಧಿಕಾರವು ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳು ಅಗತ್ಯಪಡಿಸಬಹುದಾದಂತೆ ಸರಿಯಾದ ಲೆಕ್ಕಗಳ ಪುಸ್ತಕಗಳು ಮತ್ತು ಅಂಥ ಇತರೆ ಪುಸ್ತಕಗಳನ್ನು ಇಡುವಂತೆ ಮಾಡತಕ್ಕುದು ಮತ್ತು ಅಂಥ ನಿಯಮಗಳಿಗನುಸಾರವಾಗಿ ಲೆಕ್ಕಗಳ ವಾರ್ಷಿಕ ಹೇಳಿಕೆಯನ್ನು ಸಿದ್ಧಪಡಿಸತಕ್ಕುದು.
- ಪ್ರಾಧಿಕಾರವು ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ವ್ಯಕ್ತಿಗಳಿಂದ ವಾರ್ಷಿಕವಾಗಿ ತನ್ನ ಲೆಕ್ಕಗಳ ಲೆಕ್ಕ ಪರಿಶೋಧನೆಯಾಗುವಂತೆ ಮಾಡತಕ್ಕುದು.
- ಪ್ರಾಧಿಕಾರದ ಲೆಕ್ಕಗಳ ಲೆಕ್ಕಪರಿಶೋಧನೆಯಾದ ಕೂಡಲೇ ಪ್ರಾಧಿಕಾರವು ಅದರ ಒಂದು ಪ್ರತಿಯನ್ನು ಅದರ ಮೇಲಣ ಲೆಕ್ಕ ಪರಿಶೋಧಕರ ವರದಿಯ ಒಂದು ಪ್ರತಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕುದು ಮತ್ತು ಲೆಕ್ಕಗಳನ್ನು ನಿಯಮಿಸಲಾದ ರೀತಿಯಲ್ಲಿ ಪ್ರಕಟಿಸುವಂತೆ ಮಾಡತಕ್ಕುದು ಮತ್ತು ಅದರ ಪ್ರತಿಗಳನ್ನು ಯೋಗ್ಯ ಬೆಲೆಯಲ್ಲಿ ಮಾರಾಟಕ್ಕಾಗಿ ಇಡತಕ್ಕುದು.
- ಲೆಕ್ಕ ಪರಿಶೋಧಕರ ವರದಿಯ ಪರಿಶೀಲನೆಯ ತರುವಾಯ ರಾಜ್ಯ ಸರ್ಕಾರವು ಸೂಕ್ತವೆಂದು ಭಾವಿಸಿ ಹೊರಡಿಸಬಹುದಾದಂಥ ನಿರ್ದೇಶನಗಳನ್ನು ಪ್ರಾಧಿಕಾರವು ಪಾಲಿಸತಕ್ಕುದು.

## ಅಧ್ಯಾಯ–IV
### ಸಂಕೀರ್ಣ

17. **ಪ್ರವೇಶಾಧಿಕಾರಿಗಳು.**_ಪ್ರಾಧಿಕಾರವು ಯಾವುದೇ ಭೂಮಿಯ ಅಥವಾ ಕಟ್ಟಡದ ಒಳಗೆ ಅಥವಾ ಮೇಲೆ._

- ಅಂಥ ಭೂಮಿಯ ಅಥವಾ ಕಟ್ಟಡದ ಯಾವುದೇ ವಿಚಾರಣೆ, ಪರಿವೀಕ್ಷಣೆ, ಅಳತೆ ಅಥವಾ ಸಮೀಕ್ಷೆ ನಡೆಸುವ ಅಥವಾ ಮಟ್ಟಗಳನ್ನು ತೆಗೆದುಕೊಳ್ಳುವ;
- ನಿರ್ಮಾಣದ ಹಂತದಲ್ಲಿರುವ ಕಾಮಗಾರಿಗಳನ್ನು ಪರೀಕ್ಷಿಸುವ ಮತ್ತು ಒಳಚರಂಡಿ ಮತ್ತು ಚರಂಡಿಗಳ ಮಾರ್ಗವನ್ನು ನಿರ್ಧರಿಸುವ;
- ಭೂಮಿಯ ಒಳಪದರಕ್ಕೆ ಅಗೆಯುವ ಅಥವಾ ಕೊರೆಯುವ;
- ಮೇರೆಗಳನ್ನು ಮತ್ತು ಉದ್ದೇಶಿತ ಕಾರ್ಯರೇಖೆಗಳನ್ನು ನಿರ್ಧರಿಸುವ;
- ಗುರುತುಗಳನ್ನು ಹಾಕಿ ಮತ್ತು ಕಾಲುವೆಗಳನ್ನು ತೋಡಿ ಅಂಥ ಮಟ್ಟಗಳು, ಮೇರೆಗಳು ಮತ್ತು ರೇಖೆಗಳನ್ನು ಮಾಡುವ;
- ಯಾವುದೇ ಭೂಮಿಯನ್ನು, ಯಾವುದೇ ನಕ್ಷೆಯನ್ನು ಉಲ್ಲಂಘಿಸಿ ಅಥವಾ ಯಾವ ಷರತ್ತುಗಳಿಗೊಳಪಟ್ಟು ಅನುಮತಿ ನೀಡಲಾಗಿದೆಯೋ ಆ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿ ಅಭಿವೃದ್ಧಿಗೊಳಿಸಲಾಗುತ್ತಿದೆಯೇ ಅಥವಾ ಅಭಿವೃದ್ಧಿಗೊಳಿಸಲಾಗಿದೆಯೇ ಎಂಬುದನ್ನು ಖಚಿತಪಡಿಸುವ; ಅಥವಾ
- ಈ ಅಧಿನಿಯಮದ ಸಮರ್ಥ ನಿರ್ವಹಣೆಗೆ ಅವಶ್ಯಕವಿರುವ ಇತರ ಯಾವುದೇ ಕಾರ್ಯವನ್ನು ಮಾಡುವ ಉದ್ದೇಶಗಳಿಗಾಗಿ ಸಹಾಯಕರು ಅಥವಾ ಕೆಲಸಗಾರರೊಂದಿಗೆ ಅಥವಾ ಅವರಿಲ್ಲದೆ ಪ್ರವೇಶಿಸಲು ಯಾವೊಬ್ಬ ವ್ಯಕ್ತಿಯನ್ನು ಪ್ರಾಧಿಕೃತಗೊಳಿಸಬಹುದು.

  ಪರಂತು___

  i. ಸೂರ್ಯೋದಯ ಹಾಗೂ ಸೂರ್ಯಾಸ್ತಗಳ ನಡುವಣ ಅವಧಿಯ ಹೊರತು ಮತ್ತು ಅಧಿಭೋಗದಾರನಿಗೆ ಅಥವಾ ಆಧಿಭೋಗದಾರನಿಲ್ಲದಿದ್ದರೆ, ಭೂಮಿಯ ಅಥವಾ ಕಟ್ಟಡ ಮಾಲೀಕನಿಗೆ ಸೂಕ್ತ ನೋಟೀಸನ್ನು ನೀಡದೆ ಅಂಥ ಪ್ರವೇಶವನ್ನು ಮಾಡತಕ್ಕುದಲ್ಲ.
  ii. ಪ್ರತಿಯೊಂದು ಸಂದರ್ಭದಲ್ಲಿಯೂ, ಅಂಥ ಭೂಮಿ ಅಥವಾ ಕಟ್ಟಡದಲ್ಲಿ ಮಹಿಳೆಯರು ಅಥವಾ ಮಕ್ಕಳು ಯಾರಾದರೂ ಇದ್ದರೆ, ಅವರಿಗೆ ಅಲ್ಲಿಂದ ಹೊರಹೋಗಲು ಸಾಕಷ್ಟು ಅವಕಾಶವನ್ನು ನೀಡತಕ್ಕುದು.
  iii. ಯಾವ ಉದ್ದೇಶಕ್ಕಾಗಿ ಪ್ರವೇಶ ಮಾಡಲಾಗಿದೆಯೋ ಆ ಉದ್ದೇಶದ ಸಂಧರ್ಭೋಚಿತ ಅವಶ್ಯಕತೆಗಲಿಗೆ ಸಂಗತವಾಗಿರುವಷ್ಟರಮಟ್ಟಿಗೆ ಪ್ರವೇಶಿಸಿದ ಭೂಮಿಯ ಅಥವಾ ಕಟ್ಟಡದ ಅಧಿಭೋಗದಾರರ ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಗಳಿಗೆ ಯಾವಾಗಲೂ ಸೂಕ್ತ ಗಮನ ನೀಡತಕ್ಕುದು.

**18. ಪ್ರಾಧಿಕಾರದಿಂದ ನಿರ್ದೇಶನಗಳು.—**

- ಪ್ರಾಧಿಕಾರವು, 9ನೇ ಪ್ರಕರಣದ ಅಡಿಯಲ್ಲಿ ರೂಪಿಸಲಾದ ಅಭಿವೃದ್ಧಿ ಯೋಜನೆಗಳು ಮತ್ತು ಸ್ಕೀಮುಗಳನ್ನು ಅಥವಾ ಯಾವುದೇ ಪಟ್ಟಣ ಯೋಜನಾ ಸ್ಕೀಮನ್ನು ನೆರವೇರಿಸುವ ಸಲುವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಮತ್ತು ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಪಟ್ಟ ಅಂಥ ಇತರ ನಿಕಾಯಗಳಿಗೆ ನಿರ್ದೇಶಗಳನ್ನು ನೀಡಬಹುದು, ಪ್ರಾಧಿಕಾರವು ಹೊರಡಿಸಿದ ನಿರ್ದೇಶಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976(ಕರ್ನಾಟಕ ಅಧಿನಿಯಮ, 1976 ರ 12) 53ನೇ ಪ್ರಕರಣದ ಅಡಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಹೊರಡಿಸುವ ಯಾವುದೇ ನಿರ್ದೇಶನಗಳಿಗಿಂತ ಹೆಚ್ಚಿನ ಪ್ರಭಾವವುಳ್ಳದ್ದಾಗಿರತಕ್ಕುದು.
- ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಅಂಥ ಪ್ರತಿಯೊಂದು ನಿರ್ದೇಶವನ್ನೂ ಅದನ್ನು ಯಾವ ನಿಕಾಯಕ್ಕಾಗಿ ಹೊರಡಿಸಲಾಗಿದೆಯೋ ಆ ನಿಕಾಯವು ಪಾಲಿಸತಕ್ಕುದು. ತಪ್ಪಿದಲ್ಲಿ, (1)ನೇ ಉಪಪ್ರಕರಣದ ಅಡಿಯಲ್ಲಿ ತಗುಲಿದ ವೆಚ್ಚವೇನಾದರೂ ಇದ್ದರೆ, ಅದನ್ನು ಸಂಬಂಧಪಟ್ಟ ನಿಕಾಯದಿಂದ ವಸೂಲು ಮಾಡಲು ಪ್ರಾಧಿಕಾರವು ಸಕ್ಷಮವಾಗಿರತಕ್ಕುದು.
- ಪ್ರಾಧಿಕಾರ ಮತ್ತು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿತವಾದ ಮಂಡಲಿ ಅಥವಾ ಇತರ ನಿಕಾಯಗಳ ನಡುವೆ, ಅವುಗಳಿಗೆ ನೀಡಿದ ನಿರ್ದೇಶಗಳ ಸಂಬಂಧದಲ್ಲಿ ಯಾವುದೇ ವಿವಾದ ಉಂಟಾದರೆ, ಅದನ್ನು ರಾಜ್ಯ ಸರ್ಕಾರವು ನಿರ್ಧರಿಸತಕ್ಕುದು ಮತ್ತು ಅದರ ತೀರ್ಮಾನವು ಅಂತಿಮವಾಗಿರತಕ್ಕುದು.

**19. ಮಹಾನಗರ ಆಯುಕ್ತನು ನಿಗಮ ಮುಂತಾದವುಗಳ ಸಭೆಗಳಿಗೆ ಹಾಜರಾಗುವುದು.—**

- ಮಹಾನಗರ ಆಯುಕ್ತನು ಬೆಂಗಳೂರು ನಗರ ನಿಗಮ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಸಭೆಗಳಿಗೆ ಹಾಜರಾಗಲು ಮತ್ತು ಅವುಗಳಲ್ಲಿ ಪಾಲ್ಗೊಳ್ಳಲು ಹಕ್ಕುಳ್ಳವನಾಗಿರತಕ್ಕುದುದ ಆದರೆ ಮತ ನೀಡಲು ಅವನಿಗೆ ಹಕ್ಕಿರತಕ್ಕುದಲ್ಲ.
- ಸದರಿ ನಿಯಮಗಳು ಮಹಾನಗರ ಆಯುಕ್ತನನ್ನು ತಮ್ಮ ಸಭೆಗಳಿಗೆ ಹಾಜರಾಗುವಂತೆ ಆಹ್ವಾನಿಸತಕ್ಕುದು.

20. **ಅಧಿನಿಯಮದ ಉಪಬಂಧಗಳ ಉಲ್ಲಂಘನೆಗೆ ದಂಡ:—** ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಅಥವಾ ಅದರ ಅಡಿಯಲ್ಲಿ ರಚಿತವಾದ ಅಥವಾ ಮಂಜೂರಾದ ಯಾವುದೇ ನಿಯಮ, ವಿನಿಯಮ ಅಥವಾ ಉಪ ಕಾನೂನನ್ನು ಅಥವಾ ಸ್ಕೀಮನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕುದು ಮತ್ತು ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ, ಉಲ್ಲಂಘನೆಯು ಮುಂದುವರಿದ ಮೊದಲನೆಯ ದರ ತರುವಾಯದ ಪ್ರತಿಯೊಂದು ದಿನಕ್ಕೆ ಒಂದು ತಿಂಗಳವರೆಗೆ

ವಿಸ್ತರಿಸಬಹುದಾದ ಅವಧಿಯ ಹೆಚ್ಚುವರಿ ಕಾರವಾಸದಿಂದ ಅಥವಾ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ಎಂಡತನಾಗತಕ್ಕುದು.

**21. ಕಂಪನಿಗಳಿಂದ ಅಪರಾಧಗಳು._**

- ಈ ಅಧಿನಿಯಮದ ಅಡಿಯಲ್ಲಿ ಅಪರಾಧವನ್ನು ಮಾಡುವ ವ್ಯಕ್ತಿಯು ಒಂದು ಕಂಪನಿಯಾಗಿದ್ದು, ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ವ್ಯವಹರಣೆಗಳ ನಿರ್ವಹಣೆಗಾಗಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಆ ಅಪರಾಧದ ದೋಷಿಯೆಂದು ಭಾವಿಸತಕ್ಕುದು ಮತ್ತು ತದನಂಸಾರವಾಗಿ ಅವರ ವಿರುದ್ಧದ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕುದು.

  ಪರಂತು, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವನ್ನು ತಡೆಗಟ್ಟಲು ತಾನು ಯಥೋಚಿತವಾದ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ಯಾವೊಬ್ಬ ವ್ಯಕ್ತಿಯು ರುಜುವಾತುಪಡಿಸಿದರೆ, ಈ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ ಈ ಅಧಿನಿಯಮದಲ್ಲಿ ಉಪಬಂಧಿಸಲಾಗಿರುವ ಯಾವುದೇ ಶಿಕ್ಷೆಗೆ ಅಂಥ ವ್ಯಕ್ತಿಯನ್ನು ಗುರಿಯಾಗುವಂತೆ ಮಾಡತಕ್ಕುದಲ್ಲ.

- (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿಯ ಒಂದು ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಅವನ ಕಡೆಯಿಂದಾದ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಸಂಭವಿಸಿತೆಂದು ಹೇಳಬಹುದಾದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ದೋಷಿಯೆಂದು ಭಾವಿಸತಕ್ಕುದು ಮತ್ತು ತದನುಸಾರವಾಗಿ ಅವನು ತನ್ನ ವಿರುದ್ಧ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕುದು.

  **ವಿವರಣೆ._ ಈ ಪ್ರಕರಣದ ಉದ್ದೇಶಕ್ಕಾಗಿ._**

  i. "ಕಂಪನಿ" ಎಂದರೆ ಒಂದು ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು
  ii. "ನಿರ್ದೇಶಕ" ಎಂದರೆ ಒಂದು ಫರ್ಮಿನ ಸಂಬಂಧದಲ್ಲಿ ಫರ್ಮಿನ ಒಬ್ಬ ಪಾಲುದಾರ.

22. **ವಸೂಲಾದ ಜುಲ್ಮಾನೆಗಳು ನಿಧಿಗೆ ಜಮೆಯಾಗಬೇಕು._** ಈ ಅಧಿನಿಯಮದ ಅಡಿಯಲ್ಲಿ ಅಭಿಯೋಜನೆದಗಳ ಸಂಬಂಧದಲ್ಲಿ ವಸೂಲಾದ ಎಲ್ಲ ಜುಲ್ಮಾನೆಗಳು ನಿಧಿಗೆ ಜಮೆಯಾಗತಕ್ಕುದು.

23. **ಸದಸ್ಯರು ಮತ್ತು ಅಧಿಕಾರಿಗಳು ಸಾರ್ವಜನಿಕ ನೌಕರರಾಗಿರಬೇಕು._** ಪ್ರಾಧಿಕಾರದ ಪ್ರತಿಯೊಬ್ಬ ಸದಸ್ಯ, ಪ್ರತಿಯೊಬ್ಬ ಅಧಿಕಾರಿ ಅಥವಾ ಇತರ ಉದ್ಯೋಗಿಯನ್ನು ಭಾರತ ದಡಸಂಹಿತೆಯ 21ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಸಾರ್ವಜನಿಕ ನೌಕರನೆಂದು ಭಾವಿಸತಕ್ಕುದು.

24. **ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ ಯಾವೊಬ್ಬ ವ್ಯಕ್ತಿಯ ವಿರುದ್ಧ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಯು ಇರತಕ್ಕುದಲ್ಲ.

25. **ಪ್ರತ್ಯಾಯೋಜಿಸುವ ಅಧಿಕಾರ.–** ಪ್ರಾಧಿಕಾರವು, ಅಧಿಸೂಚನೆಯ ಮೂಲಕ ವಿನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊರತುಪಡಿಸಿ, ಈ ಅಧಿನಿಯಮದ ಅಡಿಯಲ್ಲಿ ತಾನು ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರದ ಅಧ್ಯಕ್ಷ ಅಥವಾ ಅಂಥ ಅಧಿಕಾರಿಯು ಸಹ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಚಲಾಯಿಸಬಹುದೆಂದು ನಿರ್ದೇಶಿಸಬಹುದು.

26. **ಪುನರೀಕ್ಷಣೆ:–**

- ರಾಜ್ಯ ಸಕಾರವು ಪ್ರಾಧಿಕಾರದ ಯಾವುದೇ ವ್ಯವಹರಣೆಗಳ ಕಾನೂನು ಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ತಾನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಆ ಯಾವುದೇ ಆದೇಶ ಅಥವಾ ವ್ಯವಹರಣೆಗಳ ದಾಖಲೆಗಳನ್ನು ತರಿಸಿಕೊಳ್ಳಬಹುದು ಮತ್ತು ಅದಕ್ಕೆ ಸಂಬಂಧಪಟ್ಟಂತೆ ತಾನು ಯುಕ್ತನೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸಬಹುದು.
- ಪ್ರಾಧಿಕಾರವು ತನ್ನ ಯಾವೊಬ್ಬ ಅಧೀನ ಅಧಿಕಾರಿಯ ಯಾವುವೇ ವ್ಯವಹರಣೆಗಳ ದಾಖಲೆಗಳನ್ನು ಯಾವುದೇ ಆದೇಶದ ಅಥವಾ ವ್ಯವಹರಣೆಗಳ ಕಾನೂನು ಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ತಾನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ತರಿಸಿಕೊಳ್ಳಬಹುದು ಮತ್ತು ಅದಕ್ಕೆ ಸಂಬಂಧಪಟ್ಟಂತೆ ತಾನು ಯುಕ್ತವೆಂದು ಭಾವಿಸುವಂಥ ಆದೇಶವನ್ನು ಹೊರಡಿಸಬಹುದು.
- ಮನವಿ ಮಾಡಿಕೊಳ್ಳಲು ಯಾವೊಬ್ಬ ವ್ಯಕ್ತಿಗೆ ಒಂದು ಅವಕಾಶವನ್ನು ನೀಡಿದ ಹೊರತು, (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಅಡಿಯಲ್ಲಿ ಅವನಿಗೆ ಪ್ರತಿಕೂಲವಾದ ಯಾವುದೇ ಆದೇಶವನ್ನು ಹೊರಡಿಸತಕ್ಕುದಲ್ಲ.

27. **ಪ್ರಾಧಿಕಾರಕ್ಕೆ ನಿರ್ದೇಶಗಳನ್ನು ನೀಡಲು ಸರ್ಕಾರದ ಅಧಿಕಾರ.–** ರಾಜ್ಯ ಸರ್ಕಾರವು ಪ್ರಾಧಿಕಾರಕ್ಕೆ ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು ಅವಶ್ಯ ಅಥವಾ ಯುಕ್ತವಾದವುಗಳೆಂದು ತಾನು ಭಾವಿಸಬಹುದಾದಂಥ ನಿರ್ದೇಶಗಳನ್ನು ನೀಡಬಹುದು ಮತ್ತು ಅಂಥ ನಿರ್ದೇಶವನ್ನು ಪಾಲಿಸುವುದು ಪ್ರಾಧಿಕಾರದ ಕರ್ತವ್ಯವಾಗಿರತಕ್ಕುದು.

28. **ಅಧಿನಿಯಮವು ಇತರ ಕಾನೂನುಗಳಿಗೆ ಅಧ್ಯಾರೋಹಿಯಾಗಿರಬೇಕು.–** ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅದಕ್ಕೆ ಅಸಂಗತವಾಗಿರುವಂಥ ಯಾವುದೇ ವಿಷಯವನ್ನು ಒಳಗೊಂಡಿದ್ದರೂ ಪರಿಣಾಮವುಳ್ಳದ್ದಾಗಿರತಕ್ಕುದು.

**29. ನಿಯಮಗಳ ರಚನಾಧಿಕಾರ._**

- ರಾಜ್ಯ ಸರ್ಕಾರವು, ಪೂರ್ವ ಪ್ರಕಟಣೆಯ ಷರತ್ತಿಗೆ ಒಳಪಟ್ಟು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವ ಸಲುವಾಗಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.
- ಈ ಪ್ರಕರಣದ ಅಡಿಯಲ್ಲಿ ರಚಿಸಿದ ಪ್ರತಿಯೊಮದು ನಿಯಮವನ್ನು ಅದನ್ನು ರಚಿಸಿದ ಮೇಲೆ ಎಷ್ಟು ಬೇಗನೆ ಸಾಧ್ಯವೋ ಅಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಒಂದೇ ಅಧಿವೇಶದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಇರಿಸತಕ್ಕುದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದು ಬರುವ ಅಧಿವೇಶನಗಳ, ನಿಕಟೋತ್ತರ ಅಧಿವೇಶನಗಳು ಮುಗಿಯುವುದಕ್ಕೆ ಮೊದಲು ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಲು ಎರಡೂ ಸದನಗಳು ಒಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎಡರೂ ಸದನಗಳು ಒಪ್ಪಿದರೆ, ಆ ನಿಯಮವು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಮಾರ್ಪಾಟನ್ನು ಅಥವಾ ರದ್ದಿಯಾತಿಯನ್ನು ಅಧಿಸೂಚನೆ ಮಾಡಿದ ದಿನಾಂಕದಿಂದ, ಸಂದರ್ಭಾನುಸಾರ, ಅಂಥ ಮಾರ್ಪಾಟು ಆದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ. ಆದರೆ ಅಂಥ ರದ್ದಿಯಾತಿ ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕಾರ್ಯದ ಉರ್ಜಿತತೆಗೆ ಪ್ರತಿಕೂಲವಾಗಿ ಇರತಕ್ಕುದಲ್ಲ.

30. **ವಿನಿಯಮಗಳು._** ಪ್ರಾಧಿಕಾರವು, ಅಧಿಸೂಚನೆಯ ಮೂಲಕ ಮತ್ತು ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ, ಈ ಅಧಿನಿಯಮದ ಅಡಿಯಲ್ಲಿನ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವಂತೆ, ಈ ಅಧಿನಿಯಮ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳಿಗೆ ಅಸಂಗತವಾಗದಂಥ ವಿನಿಯಮಗಳನ್ನು ರಚಿಸಬಹುದು. ಪ್ರಾಧಿಕಾರದ ಅಭಿಪ್ರಾಯದಲ್ಲಿ ಯಾವ ವಿಷಯದ ಸಂಬಂಧದಲ್ಲಿ ವಿನಿಯಮಗಳ ಮೂಲ ಉಪಬಂಧ ಕಲ್ಪಿಸಬೇಕೆಂದು ಅಥವಾ ಕಲ್ಪಿಸಬಹುದೆಂದು ಅಗತ್ಯ ಪಡಿಸಲಾಗಿದೆಯೋ ಆ ವಿಷಯದ ಸಂಬಂಧದಲ್ಲಿ ವಿನಿಯಮವನ್ನು ರಚಿಸಬಹುದು.

31. **ಕರ್ನಾಟಕ ನಗರ ಮತ್ತು ಗ್ರಾಮೀಣ ಪ್ರದೇಶ ಯೋಜನಾ ಅಧಿನಿಯಮ, 1961 ಕ್ಕೆ ತಿದ್ದುಪಡಿ._** ಕರ್ನಾಟಕ ನಗರ ಮತ್ತು ಗ್ರಾಮೀಣ ಪ್ರದೇಶ ಯೋಜನಾ ಅಧಿನಿಯಮ, 1961 (ಕರ್ನಾಟಕ ಅಧಿನಿಯಮ, 1963ರ 11)ರ 81–ಬಿ ಪ್ರಕರಣದ ತರುವಾಯ, ಕೆಳಕಂಡ ಪ್ರಕರಣವನ್ನು ಸೇರಿತಕ್ಕುದು, ಎಂದರೆ._

"81–ಸಿ ಬೆಂಗಳೂರು ಮಹಾನಗರ ಪ್ರದೇಶದ ಸ್ಥೂಲ ಅಭಿವೃದ್ಧಿ ಯೋಜನೆ ಮತ್ತು ಸಮಗ್ರ ಅಭಿವೃದ್ಧಿ ಯೋಜನೆ.__ ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985ರಲ್ಲಿ ಪರಿಭಾಷಿಸಲಾಗಿರುವಂತೆ ಬೆಂಗಳೂರು ಮಹಾನಗರ ಪ್ರದೇಶದೊಳಗಿನ ಯೋಜನಾ ಪ್ರಾಧಿಕಾರಗಳನ್ನು ಮತ್ತು ಸಮಗ್ರ

ಅಭಿವೃದ್ಧಿ ಯೋಜನೆಗಳನ್ನು ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಅನುಮೋದನೆಗಾಗಿ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕುದು ಮತ್ತು ಸದರಿ ಪ್ರಾಧಿಕಾರವು ಅಂಥ ಸ್ಥೂಲ ಅಭಿವೃದ್ಧಿ, ನಿರ್ದೇಶಕರ ಅಧಿಕಾರಿಗಳನ್ನು ಚಲಾಯಿಸತಕ್ಕುದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕುದು, 9 ಮತ್ತು 19ನೇ ಪ್ರಕರಣಗಳ ಉಪಬಂಧಗಳು, ಈ ಪ್ರಕರಣದ ಉದ್ದೇಶಕ್ಕಾಗಿ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕುದು.

**ಎ.ಎನ್.ಬ್ಯಾನರ್ಜಿ,**
**ಕರ್ನಾಟಕ ರಾಜ್ಯದ ರಾಜ್ಯಪಾಲರು,**
**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,**
**ಕೆ.ಆರ್.ಚಾಮಯ್ಯ,**
**ಪ್ರಾಯೋಪಕಾರರು ಮತ್ತು ಸರ್ಕಾರದ ಕಾರ್ಯದರ್ಶಿ,**
**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.**

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಂವ್ಯಶಾಇ 10 ಶಾಸನ 2004

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ: 23–3–2005

**ಅಧಿಸೂಚನೆ**

ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2005ಕ್ಕೆ 2005ರ ಮಾರ್ಚ್ ಮಾಹೆಯ 23ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2005ರ ಕರ್ನಾಟಕ ಅಧಿನಿಯಮ ಸಂಖ್ಯೆ 08 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

XX XX XX

(XX ಲಗತ್ತಿಸಲಾದ ವಿಷಯವನ್ನು ಇಲ್ಲಿ ಸೇರಿಸತಕ್ಕದ್ದು)

1. ಕರ್ನಾಟಕ ರಾಜ್ಯಪತ್ರದ ಸಂಕಲನಕಾರರು, ಬೆಂಗಳೂರು, ಇವರಿಗೆ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯ ಭಾಗ IV-Aದಲ್ಲಿ ದಿನಾಂಕ: 23–3–2005ರಂದು ಪ್ರಕಟಿಸಬೇಕೆಂದು ಕೋರಿದೆ. ಇದರ ಮುದ್ರಿತ ಬಿಡಿ ಪ್ರತಿಗಳನ್ನು ವಾಡಿಕೆಯ ಕ್ರಮದಂತೆ 250 ಪ್ರತಿಗಳನ್ನು ಪ್ರಾರೂಪಣಾ ಶಾಖೆ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಗೂ, 1000 ಪ್ರತಿಗಳನ್ನು ನಗರಾಭಿವೃದ್ಧಿ ಇಲಾಖೆಗೂ ಮತ್ತು ತಲಾ 50 ಪ್ರತಿಗಳನ್ನು ಈ ಇಲಾಖೆಯ ಪ್ರಕಟಣೆ ಮತ್ತು ಕ್ರೋಢೀಕರಣ ಶಾಖೆಗೂ ಕಳುಹಿಸಿಕೊಡತಕ್ಕದ್ದು.
2. ನಿರ್ದೇಶಕರು, ಭಾಷಾಂತರ ನಿರ್ದೇಶನಾಲಯ, ಬೆಂಗಳೂರು.

**ಪ್ರತಿಗಳು:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು (ಮೇಲ್ಪತ್ರದೊಂದಿಗೆ)

3. ಸಚಿವ ಸಂಪುಟ ಶಾಖೆ (ಸಿ. 371:2004)
4. ಪ್ರಕಟಣಾ ಶಾಖೆ: ಕ್ರೋಢೀಕರಣ ಶಾಖೆ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ
5. ಬಿಡಿ ಪ್ರತಿಗಳು.

**2005ರ ಕರ್ನಾಟಕ ಅಧಿನಿಯಮ ಸಂಖ್ಯೆ 08**
**(2005ರ ಮಾರ್ಚ್ ಇಪ್ಪತ್ತೂರನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)**
**ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ)**
**ಅಧಿನಿಯಮ, 2005**
**(2005ರ ಮಾರ್ಚ್ ಇಪ್ಪತ್ತೂರನೇ ದಿನಾಂಕದಂದು ರಾಜ್ಯಪಾಲರ ಅನುಮೋದನೆಯನ್ನು ಪಡೆಯಲಾಗಿದೆ**

ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಅಧಿನಿಯಮ, 1985ನ್ನು (1985ರ ಕರ್ನಾಟಕ ಅಧಿನಿಯಮ 39) ಮತ್ತಷ್ಟು ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ ಕರ್ನಾಟಕ ರಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2005 ಎಂದು ಕರೆಯತಕ್ಕದ್ದು.
   (2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. **2ನೇ ಪ್ರಕರಣದ ತಿದ್ದುಪಡಿ:–** ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985ರ 2ನೇ ಪ್ರಕರಣದ (ಸಿ) ಖಂಡದಲ್ಲಿ "ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕು" ಎಂಬ ಪದಗಳಿಗೆ "ಬೆಂಗಳೂರು ಗ್ರಾಮಾಂತರ ಜಿಲ್ಲೆ" ಎಂಬ ಪದಗಳನ್ನು ಪ್ರತಿಯೋಜಿತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

**ಜಿ.ದಕ್ಷಿಣಾಮೂರ್ತಿ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನಾ ಇಲಾಖೆ.

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವಾಲಯ**
**ಅಧಿಸೂಚನೆ**
**ಸಂಖ್ಯೆ: ಸಂವ್ಯಶಾಇ 8 ಶಾಸನ 2006, ಬೆಂಗಳೂರು,**
**ದಿನಾಂಕ: 16ನೇ ಏಪ್ರಿಲ್, 2010**

ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2009ಕ್ಕೆ, 2010ರ ಏಪ್ರಿಲ್ ಮಾಹೆಯ 14ನೇ ದಿನಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2010ರ ಕರ್ನಾಟಕ ಅಧಿನಿಯಮ ಸಂಖ್ಯೆ:16 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಿಲಾಗಿದೆ.

**2010ರ ಕರ್ನಾಟಕ ಅಧಿನಿಯಮ ಸಂಖ್ಯೆ 16**
**(2010ರ ಏಪ್ರಿಲ್ ಹದಿನಾರನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)**

**ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2009**

**(2010ರ ಏಪ್ರಿಲ್ ಹದಿನಾಲ್ಕನೇ ದಿನಾಂಕದಂದು ರಾಜ್ಯಪಾಲರ ಅನುಮೋದನೆಯನ್ನು ಪಡೆಯಲಾಗಿದೆ)**

ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985 ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985 ನ್ನು (1985ರ ಕರ್ನಾಟಕ ಅಧಿನಿಯಮ 39) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2009 ಎಂದು ಕರೆಯತಕ್ಕದ್ದು.
   (2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. **16ನೇ ಪ್ರಕರಣದ ತಿದ್ದುಪಡಿ:–** ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, 1985ರ (1985ರ ಕರ್ನಾಟಕ ಅಧಿನಿಯಮ 39)16ನೇ ಪ್ರಕರಣದಲ್ಲಿ (3)ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–
   "(3) ಪ್ರಾಧಿಕಾರವು ಪರಿಶೋಧಿತ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧಕರ ವರದಿಯನ್ನು ನಿಯಮಿಸಿದ ನಮೂನೆಯಲ್ಲಿ ಪ್ರಕಟಿಸತಕ್ಕದ್ದು. ಪ್ರಾಧಿಕಾರವು ಅಂಥ ಪರಿಶೋಧಿತ ಲೆಕ್ಕಪತ್ರಗಳ ಪ್ರತಿಗಳನ್ನು ಮತ್ತು ಲೆಕ್ಕಪರಿಶೋಧಕರ ವರದಿಯ ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು. ರಾಜ್ಯ ಸರ್ಕಾರವು ಪರಿಶೋಧಿತ ಲೆಕ್ಕಪತ್ರಗಳನ್ನು ಹಾಗೂ ಲೆಕ್ಕ ಪರಿಶೋಧಕರ ವರದಿಯನ್ನು ಸ್ವೀಕರಿಸಿದ ಮೇಲೆ ಆದಷ್ಟು ಬೇಗನೆ ಅವನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**ಜಿ.ಕೆ.ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನಾ ಇಲಾಖೆ

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ಪತ್ರಿಕೆ**

| ಭಾಗ–IV-A | ಬೆಂಗಳೂರು, ಶುಕ್ರವಾರ, ಏಪ್ರಿಲ್ ೧೬, ೨೦೧೦ (ಚೈತ್ರ ೨೬, ಶಕ ವರ್ಷ ೧೯೩೨) | ನಂ. ೩೯೭ |
|---|---|---|

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಸಂವ್ಯಶಾಇ 8 ಶಾಸನ 2006, ಬೆಂಗಳೂರು,**
**ದಿನಾಂಕ: 16ನೇ ಏಪ್ರಿಲ್, 2010**

ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2009ಕ್ಕೆ, 2010ರ ಏಪ್ರಿಲ್ ಮಾಹೆಯ 14ನೇ ದಿನಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2010ರ ಕರ್ನಾಟಕ ಅಧಿನಿಯಮ ಸಂಖ್ಯೆ:16 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಿಲಾಗಿದೆ.

**2010ರ ಕರ್ನಾಟಕ ಅಧಿನಿಯಮ ಸಂಖ್ಯೆ 16**

**(2010ರ ಏಪ್ರಿಲ್ ಹದಿನಾರನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)**

**ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2009**

**(2010ರ ಏಪ್ರಿಲ್ ಹದಿನಾಲ್ಕನೇ ದಿನಾಂಕದಂದು ರಾಜ್ಯಪಾಲರ ಅನುಮೋದನೆಯನ್ನು ಪಡೆಯಲಾಗಿದೆ)**

ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985 ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985 ನ್ನು (1985ರ ಕರ್ನಾಟಕ ಅಧಿನಿಯಮ 39) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2009 ಎಂದು ಕರೆಯತಕ್ಕದ್ದು.
   (2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. **16ನೇ ಪ್ರಕರಣದ ತಿದ್ದುಪಡಿ:–** ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, 1985ರ (1985ರ ಕರ್ನಾಟಕ ಅಧಿನಿಯಮ 39)16ನೇ ಪ್ರಕರಣದಲ್ಲಿ (3)ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–
   "(3) ಪ್ರಾಧಿಕಾರವು ಪರಿಶೋಧಿತ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧಕರ ವರದಿಯನ್ನು ನಿಯಮಿಸಿದ ನಮೂನೆಯಲ್ಲಿ ಪ್ರಕಟಿಸತಕ್ಕದ್ದು. ಪ್ರಾಧಿಕಾರವು ಅಂಥ ಪರಿಶೋಧಿತ ಲೆಕ್ಕಪತ್ರಗಳ ಪ್ರತಿಗಳನ್ನು ಮತ್ತು ಲೆಕ್ಕಪರಿಶೋಧಕರ ವರದಿಯ ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು. ರಾಜ್ಯ ಸರ್ಕಾರವು ಪರಿಶೋಧಿತ ಲೆಕ್ಕಪತ್ರಗಳನ್ನು ಹಾಗೂ ಲೆಕ್ಕ

ಪರಿಶೋಧಕರ ವರದಿಯನ್ನು ಸ್ವೀಕರಿಸಿದ ಮೇಲೆ ಆದಷ್ಟು ಬೇಗನೆ ಅವನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಜಿ.ಕೆ.ಬೋರೇಗೌಡ**

ಸರ್ಕಾರದ ಕಾರ್ಯದರ್ಶಿ ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ

# ಕರ್ನಾಟಕ ರಾಜ್ಯಪತ್ರ

## ಅಧಿಕೃತವಾಗಿ ಪ್ರಕಟಿಸಲಾದುದು
## ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| **ಭಾಗ–IVA**<br>**Part-IVA** | **ಬೆಂಗಳೂರು, ಬುಧವಾರ, ಜನವರಿ೪, ೨೦೧೭ (ಪುಷ್ಯ ೧೪, ಶಕ ವರ್ಷ ೧೯೩೮)**<br>**Bengaluru, Wednesday, January 4, 2017 (Pushya 14, Shaka Varsha 1938)** | **ನಂ. ೨೦**<br>**No. 20** |

**ಸಂಸದೀಯ ವ್ಯವಹಾರಗಳ ಸಚಿವಾಲಯ**
**ಅಧಿಸೂಚನೆ**

ಸಂಖ್ಯೆ: ಸಂವ್ಯಶಾಇ 29 ಶಾಸನ 2016, ಬೆಂಗಳೂರು, ದಿನಾಂಕ: 04.01.2017.

ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2016ಕ್ಕೆ 2016ರ ಡಿಸೆಂಬರ್ ತಿಂಗಳ 31ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2017ರ ಕರ್ನಾಟಕ ಅಧಿನಿಯಮ ಸಂಖ್ಯೆ: 05 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2017ರ ಕರ್ನಾಟಕ ಅಧಿನಿಯಮ ಸಂಖ್ಯೆ: 05**

**(2017ರ ಜನವರಿ ತಿಂಗಳ 4ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)**

**ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2016**

(2016ರ ಡಿಸೆಂಬರ್ ತಿಂಗಳ 31ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮೋದನೆಯನ್ನು ಪಡೆಯಲಾಗಿದೆ)

ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಅಧಿನಿಯಮ, 1985ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

**ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಅಧಿನಿಯಮ, 1985ನ್ನು (1985ರ ಕರ್ನಾಟಕ ಅಧಿನಿಯಮ 39) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;**

ಇದು, ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು,

   (2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. **2ನೇ ಪ್ರಕರಣದ ತಿದ್ದುಪಡಿ:–** ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985ರ (1985ರ ಕರ್ನಾಟಕ ಅಧಿನಿಯಮ 39) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಕರೆಯಲಾಗಿದೆ) 2ನೇ ಪ್ರಕರಣದಲ್ಲಿ,–

(i) (ಇ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಇ) "ನಿಗಮ" ಎಂದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,"

(ii) (ಜೆ) ಖಂಡದಲ್ಲಿ "ಬೆಂಗಳೂರು ನಗರ ಪುರಸಭಾ ನಿಗಮ" ಎಂಬ ಪದಗಳಿಗೆ "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ" ಎಂಬ ಪದಗಳನ್ನು ಮತ್ತು "ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ" ಎಂಬ ಪದಗಳಿಗೆ "ಕರ್ನಾಟಕ ವಿದ್ಯುತ್ ಸರಬರಾಜು ನಿಗಮ ನಿಯಮಿತ" ಎಂಬ ಪದಗಳನ್ನು ಹಾಗೂ "ನೈರ್ಮಲ್ಯ ಮಂಡಲಿ ಅಥವಾ ಮಂಡಲ ಪಂಚಾಯತಿ" ಎಂಬ ಪದಗಳಿಗೆ "ಪಟ್ಟಣ ಪಂಚಾಯತಿ ಅಥವಾ ಗ್ರಾಮ ಪಂಚಾಯತಿ" ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು.

3. **3ನೇ ಪ್ರಕರಣದ ತಿದ್ದುಪಡಿ:–** ಮೂಲ ಅಧಿನಿಯಮದ 3ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ:–

(i) (ಬಿ) ಖಂಡದಲ್ಲಿ "ನಗರಾಭಿವೃದ್ಧಿಯ" ಎಂಬ ಪದಗಳಿಗೆ "ಬೆಂಗಳೂರು ಅಭಿವೃದ್ಧಿಯ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (ಡಿ) ಖಂಡದಲ್ಲಿ "ಬೆಂಗಳೂರು ನಗರ ನಿಗಮ" ಎಂಬ ಪದಗಳಿಗೆ "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iii) (ಎಫ್), (ಜಿ), (ಎಚ್), (ಐ) ಮತ್ತು (ಜೆ) ಖಂಡಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಎಫ್) ಪ್ರಾದೇಶಿಕ ಆಯುಕ್ತ, ಬೆಂಗಳೂರು ಪ್ರದೇಶ, ಬೆಂಗಳೂರು;

(ಜಿ) ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ;

(ಎಚ್) ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ವಸತಿ ಇಲಾಖೆ, ಕರ್ನಾಟಕ ಸರ್ಕಾರ.

(ಎಚ್–1) ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ;

(ಐ) ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ;

(ಜೆ) ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ವಾಣಿಜ್ಯ ಮತ್ತು ಜಲಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ,"

(iv) (ಎಂ), (ಎನ್), (ಒ) ಮತ್ತು (ಪಿ) ಖಂಡಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಎಂ) ಅಧ್ಯಕ್ಷ, ಕರ್ನಾಟಕ ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಳಿ;

(ಎನ್) ಅಧ್ಯಕ್ಷ, ಕರ್ನಾಟಕ ವಿದ್ಯುತ್ ಸರಬರಾಜು ನಿಗಮ ನಿಯಮಿತ;

(ಎನ್–1) ಅಧ್ಯಕ್ಷ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ:

(ಎನ್–2) ಅಧ್ಯಕ್ಷ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ;

(ಒ) ಅಧ್ಯಕ್ಷ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ;

(ಪಿ) ನಿರ್ದೇಶಕ, ಪಟ್ಟಣ ಮತ್ತು ಗ್ರಾಮಾಂತರ ಯೋಜನೆ, ಕರ್ನಾಟಕ ಸರ್ಕಾರ;"

(೨ತ) (ಆರ್) ಖಂಡವನ್ನು ಬಿಟ್ಟುಬಿಡತಕ್ಕದ್ದು.

**4. 6ನೇ ಪ್ರಕರಣದ ತಿದ್ದುಪಡಿ:–** ಮೂಲ ಅಧಿನಿಯಮದ 6ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ,–

(i) (ಎ) ಖಂಡದಲ್ಲಿ "ನಗರಾಭಿವೃದ್ಧಿಯ" ಎಂಬ ಪದಗಳಿಗೆ "ಬೆಂಗಳೂರು ಅಭಿವೃದ್ಧಿಯ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (ಇ), (ಎಫ್), (ಜಿ), (ಎಚ್) ಮತ್ತು (ಐ) ಖಂಡಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಇ) ಮೇಯರ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ;

(ಎಫ್) ಆಯುಕ್ತ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ;

(ಜಿ) ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ವಸತಿ ಇಲಾಖೆ, ಕರ್ನಾಟಕ ಸರ್ಕಾರ;

(ಜಿ–1) ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ;

(ಎಚ್) ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ;

(ಐ) ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಕರ್ನಟಕ ಸಕಾರ,"

(iii) (ಕೆ) ಮತ್ತು (ಎಲ್) ಖಂಡಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಕೆ) ನಿರ್ದೇಶಕ, ಪಟ್ಟಣ ಮತ್ತು ಗ್ರಾಮಾಂತರ ಯೋಜನೆ, ಕರ್ನಾಟಕ ಸರ್ಕಾರ;

(ಎಲ್) ಪ್ರಾದೇಶಿಕ ಆಯುಕ್ತ, ಬೆಂಗಳೂರು ಪ್ರದೇಶ, ಬೆಂಗಳೂರು,"

**5. 9ನೇ ಪ್ರಕರಣದ ತಿದ್ದುಪಡಿ:–** ಮೂಲ ಅಧಿನಿಯಮದ 9ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿನ (ix) ಖಂಡದಲ್ಲಿ "ಕರ್ನಾಟಕ ಕೊಳಚೆ ಪ್ರದೇಶ ನಿರ್ಮೂಲನ ಮಂಡಳಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ" ಎಂಬ ಪದಗಳಿಗೆ "ಕರ್ನಾಟಕ ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಲಿ, ಕರ್ನಾಟಕ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತ ಮತ್ತು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ,

**ಕೆ.ದ್ವಾರಕನಾಥ್ ಬಾಬು**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳ ಇಲಾಖೆ